ತಮ್ಮ ವೃತ್ತಿ–ಪ್ರವೃತ್ತಿಗಳಿಂದಾಗಿ ದೇಶ–ವಿದೇಶ ಸುತ್ತಿದವರು. ವಿಜಯನಗರದ ಇತಿಹಾಸವನ್ನು ಆಳವಾಗಿಯೇ, ಅಧ್ಯಯನದ ಶಿಸ್ತಿನಿಂದ ಅವರು ಓದುತ್ತಿದ್ದುದನ್ನು ಕೆಲವು ವರ್ಷಗಳ ಹಿಂದೆ ಸ್ವತಃ ಕಂಡಿದ್ದೆ. ಈ ಕಾದಂಬರಿ ಅವರ ಈ ಎಲ್ಲ ದೇಶ ಸುತ್ತಿದ, ಕೋಶ ಓದಿದ ಪರಿಶ್ರಮದ ಫಲ ಮಾತ್ರವಲ್ಲ, ಒಬ್ಬ ನುರಿತ ಕತೆಗಾರರಾಗಿ, ಸಾಹಿತಿಯಾಗಿ ಅವರು ಸಾಧಿಸಿದ ಕೌಶಲದ ಪ್ರತಿಬಿಂಬ ಕೂಡ ಹೌದು.

ಪೋರ್ಚುಗಲ್‌ನ ಲಿಸ್ಬನ್ ನಗರ, ಅದರ ಸುತ್ತ ಹರಿಯುವ ನದಿ ತೇಜೋ, ಅಲ್ಲಿನ ಶಿಲ್ಪಿ ಆಂಟೋನಿಯೋ ಮಗ ಗೇಬ್ರಿಯಲ್ ನಮಗೆ ಮೊದಲು ಎದುರಾಗುವ ಪಾತ್ರ. ಆಗ ಕಾಸ್ಟಿಲ್ ಎಂದು ಕರೆಸಿಕೊಳ್ಳುತ್ತಿದ್ದ, ಸ್ಪೇನಿನ ರಾಣಿ ಇಸಾಬೆಲ್ಲಾ ತನ್ನ ದೇಶದಿಂದ ಕ್ರಿಸ್ತನ ಸಾವಿಗೆ ಕಾರಣರಾದ ಯಹೂದಿಗಳನ್ನು ಹೊರದಬ್ಬಿದಾಗ ಪೋರ್ಚುಗಲ್ಲಿನ ರಾಜ ಜೋಅಓ ಅವರಿಗೆ ತನ್ನ ದೇಶದಲ್ಲಿ ಆಶ್ರಯ ನೀಡುತ್ತಾನೆ. ಹಾಗೆ ಒಳಬಂದ ಬೆಲ್ತ್ರಾಮ್ ಮಗಳು ಬೆಲ್ಲಾ. ಗೇಬ್ರಿಯಲ್ ಮತ್ತು ಬೆಲ್ಲಾ ಪ್ರೇಮಿಗಳು. ಇವರ ಪ್ರೇಮಕ್ಕೆ ಅಂತಸ್ತಿನ, ಧರ್ಮದ ಮತ್ತು ಬದುಕಿನಲ್ಲಿ ಛಲದಿಂದ ಗೆಲ್ಲುವ ಸಾಮರ್ಥ್ಯದ ಪಣವಿದೆ.

ವಿಜಯನಗರದ ಪಕ್ಕದ ಒಂದು ಊರು ತೆಂಬಕಪುರಿ. ಅಲ್ಲಿ ಕುಲಾವಿ ಹೊಲಿದು ಮಾರಿ ಬದುಕು ಕಟ್ಟಿಕೊಂಡ ಗಣಪಯ್ಯ ಗೌಂಡನ ಮಗಳು ಹಂಪಮ್ಮ ಅನುಪಮ ಸುಂದರಿ. ಇವಳನ್ನು ತನಗೆ ಗಂಡು ಸಂತಾನವಾಗಲಿಲ್ಲ ಎಂಬ ಕಾರಣಕ್ಕೆ ಎರಡನೆ ಮದುವೆಯಾಗಲು ಒಡ್ಡಜಟ್ಟಿ ಮಾಪಳನಾಯಕ ಬಯಸುತ್ತಾನೆ. ಅವನಿಗೆ ತನ್ನ ಹೆಂಡತಿ ತೆಂಬಕ್ಕನಿಂದ ಈಶ್ವರಿ ಎಂಬ ಪುಟ್ಟ ಮಗುವಿದೆ. ತನ್ನನ್ನು ಬಯಸಿದ ಯುವ ಶಿಲ್ಪಿ ಕೇಶವನಲ್ಲಿ ಹಂಪಮ್ಮನಿಗೂ ಒಲವು. ಆದರೆ ಹಂಪಮ್ಮನನ್ನು ಪಡೆಯಲು ಕೇಶವ ಮಲ್ಲಯುದ್ಧದಲ್ಲಿ ಒಡ್ಡಜಟ್ಟಿಯನ್ನು ಗೆಲ್ಲಬೇಕಾದ ಪಣವಿದೆ.

ಲಿಸ್ಬನ್ ಮತ್ತು ವಿಜಯನಗರದ ನಡುವಿನ ತಂತು ಕರಿಮೆಣಸು, ದಾಲ್ಚಿನ್ನಿ, ಲವಂಗದಂಥ ಸಂಬಾರ ಜೀನಸುಗಳು. ಸೂಯೆಜ್ ಕಾಲುವೆ ಮುಚ್ಚಿದ್ದೇ ಯುರೋಪಿನೊಂದಿಗೆ ಭಾರತದ ವ್ಯಾಪಾರ ಸಂಬಂಧ ಮುರಿದು ಬಿದ್ದು, ಯುರೋಪಿನ ಪೋರ್ಚುಗೀಸರು, ಫ್ರೆಂಚರು, ಸ್ಪಾನಿಶ್ ನಾವಿಕರು ನಿರಂತರವಾಗಿ ಭಾರತದೊಂದಿಗೆ ಮರಳಿ ಸಂಪರ್ಕ ಸಾಧಿಸುವುದಕ್ಕಾಗಿ ಹೊಸ ಸಮುದ್ರ ಮಾರ್ಗದ ಶೋಧಕ್ಕೆ ತೊಡಗಿದ್ದು ನಮಗೆಲ್ಲ ಗೊತ್ತೇ ಇದೆ. ಇದು ಮುಂದೆ ವಾಣಿಜ್ಯದೊಂದಿಗೆ ಧರ್ಮ, ರಾಜಕೀಯ, ಅಧಿಕಾರ ಮತ್ತು ಯುದ್ಧಗಳನ್ನು ಬೆಸೆದಿದ್ದು ಈಗ ಇತಿಹಾಸ. ಇದು ಭೂಖಂಡಗಳ ನಡುವಿನ ಪಣ.

ಈ ಹಿನ್ನೆಲೆ ಇರಿಸಿಕೊಂಡೇ ಈ ಎರಡೂ ಭೂಖಂಡಗಳ ಒಂದು ಸರಳ ಪ್ರೇಮಗಾಥೆಯನ್ನು ತನ್ನ ಕಾದಂಬರಿಯೆಂಬ ಹೂವಿನ ಹಾರಕ್ಕೆ ನಾರು ಮಾಡಿಕೊಂಡ ವಸುಧೇಂದ್ರ ಅವರು ಕಲಾತ್ಮಕವಾಗಿ ಹಾರ ನೇಯುತ್ತ ಎಂಥೆಂಥಾ ಹೂವುಗಳನ್ನೆಲ್ಲ ಆರಿಸಿ ಅದನ್ನು ಕಟ್ಟಿದ್ದಾರೆಂಬುದರಲ್ಲೇ ಈ ಕೃತಿಯ ಸ್ವಾರಸ್ಯ, ಮಹತ್ವ ಮತ್ತು ಯಶಸ್ಸು ಅಡಗಿದೆ.

ನಿರಾಶ್ರಿತರ ವಲಸೆ, ಪೌರತ್ವ, ಧರ್ಮ ಮತ್ತು ಅರ್ಥ ವ್ಯವಸ್ಥೆಯ ನಡುವಿನ ಸಂಬಂಧವೇ ರಾಜಕೀಯ ಅಧಿಕಾರ ಮತ್ತು ವ್ಯಾಪಾರದ ಮೇಲಿನ ಹಿಡಿತದ ಪ್ರಶ್ನೆ ಕೂಡ ಆಗಿರುವ ವಿಚಿತ್ರ, ಮುಖ್ಯವಾಗಿ ಸಹಗಮನ ಮತ್ತು ಲೈಂಗಿಕ ಶೋಷಣೆಯಂಥ ವಿದ್ಯಮಾನದ ವಿರುದ್ಧ ಇಲ್ಲಿ ಬರುವ ಸ್ತ್ರೀವಾದದ ಕೆಲವು ಮುಖಗಳು, ಲೈಂಗಿಕ ಅಲ್ಪಸಂಖ್ಯಾತರ ನೋವು, ಮತಾಂತರದ ವಿಭಿನ್ನ ವರಸೆಗಳು, ಜಾತೀಯತೆ ಮುಂತಾದ ಹಲವು ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿದ್ಯಮಾನಗಳನ್ನು ಬೇರೆಯೇ ದೇಶ–ಕಾಲದ ಹಿನ್ನೆಲೆಯಲ್ಲಿರಿಸಿ ಇಂದಿಗೆ ಸಲ್ಲುವ ವೈಚಾರಿಕತೆಯೊಂದಿಗೆ ಮರುವ್ಯಾಖ್ಯಾನಕ್ಕೆ ಒಳಪಡಿಸುವ ವಸುಧೇಂದ್ರ ಕಾದಂಬರಿಯ ಉದ್ದಕ್ಕೂ